ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 8 ಮಕಮು 2012

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:10.08.2012.

## ಸುತ್ತೋಲೆ

ವಿಷಯ: ಹೆಚ್‌ಡಿಎಫ್‌ಸಿ ಸಂಸ್ಥೆಯಿಂದ ಪಡೆದ ಮನೆ ನಿರ್ಮಾಣ ಮುಂಗಡದ ಜಮೆಯಲ್ಲಾಗುತ್ತಿರುವ ತಪ್ಪು ವರ್ಗೀಕರಣವನ್ನು ತಡೆಗಟ್ಟುವ ಬಗ್ಗೆ.

ಉಲ್ಲೇಖ: ಪ್ರಧಾನ ಮಹಾಲೇಖಪಾಲರ (ಎಮತ್ತುಇ) ಕಛೇರಿಯ ಪತ್ರ No. Loans 1/A3/12-13/07-08, dated: 17.04.2012.

-o-

ರಾಜ್ಯ ಸರ್ಕಾರಿ ನೌಕರರು ಹೆಚ್.ಡಿ.ಎಫ್.ಸಿ. ಸಂಸ್ಥೆಯ ಮೂಲಕ ಪಡೆದ ಗೃಹ ನಿರ್ಮಾಣ ಮುಂಗಡ ಮತ್ತು ಬಡ್ಡಿ ಮೊತ್ತವನ್ನು ನಿಗದಿತ ಕಂತುಗಳಲ್ಲಿ ಮರುಪಾವತಿಸಬೇಕಾಗಿದೆ. ಮನೆ ನಿರ್ಮಾಣ ಮುಂಗಡ ಪಡೆದಿರುವ ಮುಂಗಡದಾರರುಗಳ ವೇತನದಿಂದ ಮಾಸಿಕ ಕಂತುಗಳನ್ನು ಸರ್ಕಾರಿ ಆದೇಶ ಸಂಖ್ಯೆ: ಆಇ 95 ಎಹೆಚ್‌ಬಿ 89, ದಿನಾಂಕ: 11.09.1989ರ ಪ್ರಕಾರ ವಸೂಲು ಮಾಡಿ ಲೆಕ್ಕಶೀರ್ಷಿಕೆ '8443-00-106-0-23 PD Accounts of HDFC Advance'ಕ್ಕೆ ಜಮೆ ಮಾಡಬೇಕಾಗಿದೆ. ಆದರೆ, ಇತ್ತೀಚೆಗೆ ಕಂತುಗಳನ್ನು ಮೇಲ್ಕಂಡ ಲೆಕ್ಕಶೀರ್ಷಿಕೆಗೆ ಜಮೆ ಮಾಡುವ ಬದಲಿಗೆ, ತಪ್ಪು ವರ್ಗೀಕರಣದಿಂದ ಕಂತುಗಳನ್ನು '7610-00-201-0-03 ಪತ್ರಾಂಕಿತ ಅಧಿಕಾರಿ ಮತ್ತು ಪತ್ರಾಂಕಿತರಲ್ಲದ ಅಧಿಕಾರಿಗಳ ಮನೆ ನಿರ್ಮಾಣ ಮುಂಗಡ' ಲೆಕ್ಕ ಶೀರ್ಷಿಕೆಗೆ ಜಮಾ ಮಾಡಿರುವ ಪರಿಣಾಮವಾಗಿ, ಈ ಲೆಕ್ಕಶೀರ್ಷಿಕೆಯಡಿ ದಿನಾಂಕ:31.03.2011ರ ಅಂತ್ಯದವರೆಗೆ ಒಟ್ಟು ರೂ.1,206.56 ಲಕ್ಷಗಳು ಜಮೆಯಾಗಿದೆಯೆಂದು ಪ್ರಧಾನ ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು, ವಿವರಗಳೊಂದಿಗೆ ತಿಳಿಸಿರುತ್ತಾರೆ.

ಆದುದರಿಂದ ಇನ್ನು ಮುಂದೆ ಮುಂಗಡದಾರರುಗಳಿಂದ ನಿಯಮಾನುಸಾರ ವಸೂಲು ಮಾಡಿದ ಕಂತುಗಳನ್ನು ಲೆಕ್ಕಶೀರ್ಷಿಕೆ '8443-00-106-0-23 PD Accounts of HDFC Advance'ಕ್ಕೆ ಮಾತ್ರ ಜಮೆ ಮಾಡಲು ಕೂಡಲೇ ಅಗತ್ಯ ಕ್ರಮ ಕೈಗೊಳ್ಳಲು ಎಲ್ಲಾ ವೇತನ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳಿಗೆ ಸೂಚನೆ ನೀಡುವಂತೆ ಇಲಾಖಾ ಮುಖ್ಯಸ್ಥರುಗಳನ್ನು ಕೋರಲಾಗಿದೆ.

(ಎನ್. ಲಕ್ಷ್ಮಣ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಎಮತ್ತುಇ), ಕರ್ನಾಟಕ, ಬೆಂಗಳೂರು,
2. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು,
3. ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು – ತಮ್ಮ ಅಧೀನದ ಇಲಾಖಾ ಮುಖ್ಯಸ್ಥರುಗಳಿಗೆ ಸೂಕ್ತ ಸೂಚನೆ ನೀಡಲು ಕೋರಲಾಗಿದೆ,
4. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು,
5. ಎಲ್ಲಾ ಇಲಾಖಾ ಮುಖ್ಯಸ್ಥರುಗಳು,
6. ಎಲ್ಲಾ ಜಿಲ್ಲಾಧಿಕಾರಿಗಳು/ಎಲ್ಲಾ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು,
7. ಶಾಖಾ ರಕ್ಷಕ ಕಡತ/ಹೆಚ್ಚುವರಿ ಪ್ರತಿ

ಈ ಸುತ್ತೋಲೆಯ ಪ್ರತಿ ಆರ್ಥಿಕ ಇಲಾಖೆಯ ವೆಬ್ ಸೈಟ್ www.finance.kar.nic.in ನಲ್ಲಿ ಲಭ್ಯವಿದೆ.